ಒಂದಾಟ... ಎರಡು, ಮೂರು ಎಂದು ಮುಂದುವರಿದಿತ್ತು. ಬದಿಯಲ್ಲಿದ್ದ ತಟ್ಟೆಗಳು ಖಾಲಿ, ಕಾಫಿ ಬಂದಾಯಿತು, ಕುಡಿದೂ ಆಯಿತು. 'ಇನ್ನು ಸಾಕು ಆಟ, ಸಂಜೆ ರಿಸೆಪ್ಷನ್ನಿಗೆ ಹೋಗ್ಬೇಕು, ಬೇಗ ತಲೆಸ್ನಾನ ಮಾಡಿ ಬಾ ಮಾರಾಯ್ತಿ,' ಎಂದು ಅವಳ ಅಮ್ಮ ಹೇಳಿದರೆ ಕೇಳುವವರು ಯಾರು?

'ಅಮ್ಮ, ಪ್ಲೀಸ್.' ಪವನ ಅಲ್ಲಿ ನಿಲ್ಲಲಿಲ್ಲ. ಸಂದೇಶನ ಜಾತಿಯನ್ನು ತಾನು ಇದುವರೆಗೆ ಕೇಳಿರಲೇ ಇಲ್ಲವಲ್ಲ ಎಂಬ ಆಲೋಚನೆ ಸಣ್ಣಗೆ ಹಾದುಹೋಯ್ತು. ಮುಂಬಯಿಯಲ್ಲಿ ಮನೆಭಾಷೆ ಯಾವುದು ಎಂಬ ಬಗೆಗಷ್ಟೇ ತಲೆಕೆಡಿಸಿಕೊಳ್ಳುತ್ತಾರೆ ಎನ್ನುವುದು ಹೊಳೆಯಿತು.

'ನೀನು ಯಾವಾಗ ಹೋಗುವುದು ಅಂದಿ? ರಾಧಮ್ಮನ ಹತ್ತಿರ ಕಾಯಿಹೋಳಿಗೆ ಮಾಡಿಸಬೇಕಲ್ಲ?' ಅಮ್ಮ ಅಡುಗೆಮನೆಯಿಂದ ಕೂಗಿ ಕೇಳುತ್ತಿದ್ದಳು.

ನಿಜ ಹೇಳಬೇಕೆಂದರೆ ಅವಳು ಹತ್ತು ದಿನಗಳ ರಜೆ ಹಾಕಿ ಬಂದಿದ್ದಳು. ಈಗ ಅವಳಿಗೆ ಅಷ್ಟು ಸಮಯ ನಿಲ್ಲಲು ಮನಸ್ಸಾಗಲಿಲ್ಲ. 'ರಜೆ ಇಲ್ಲ, ಶನಿವಾರವೇ ಹೋಗಬೇಕು' ಎಂದು ತನ್ನ ಕೋಣೆಯಿಂದಲೇ ಮರುದನಿ ಕೊಟ್ಟಳು.

ಆರಾಮವಾಗಿ ನಾಲ್ಕು ದಿನ ಇದ್ದು ಹೋಗುವ ಎಂದು ಬಂದರೆ ಪ್ರತಿಸಲ ಹೀಗೆ ಆಗುತ್ತಿತ್ತು.

'ಹರೀಶನಿಗೂ ಇಪ್ಪತ್ತೆಂಟಾಯಿತು...' ಎಂದು ಒಮ್ಮೊಮ್ಮೆ ಅಮ್ಮ ಹೇಳುವುದಿತ್ತು. ಅಂದರೆ ಪವನಳ ತಮ್ಮನಿಗೂ ಇನ್ನು ಮದುವೆಯ ಪ್ರಾಯ ಬಂತು ಎಂಬ ಅರ್ಥ. ಒಮ್ಮೆ ಹಾಗೆಂದಾಗ ಪವನ, 'ನನ್ನ ಮದುವೆಗೂ, ಅವಂದಕ್ಕೂ ಸಂಬಂಧ ಇಲ್ಲ. ಅವನಿಗೆ ಸರಿಯಾದ್ದು ಸಿಕ್ಕಿದ್ರೆ ಮಾಡಿ, ನನ್ನದೇನೂ ಅಭ್ಯಂತರ ಇಲ್ಲ.' ಎಂದು ನಿರ್ಭಾವುಕಳಾಗಿ ಹೇಳಿಬಿಟ್ಟಿದ್ದಳು. ಎಂಜಿನಿಯರಿಂಗ್ ಮಾಡಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದ ಹರೀಶ ಅಮೆರಿಕೆಗೂ ಹೋಗುವ ಯೋಜನೆಯಲ್ಲಿದ್ದ.

'ಅವನಿಗೆ ಹೋಗುವ ಮುಂಚೆ ಮದುವೆಯಾಗಬೇಕಂತ ನಾನು ಗಡಿಬಿಡಿಯಲ್ಲಿ ಮದುವೆ ಮಾಡ್ಕೊಳ್ಳುವವಳಲ್ಲ. ಅವನ ಜೀವನ ಬೇರೆ, ನನ್ನದು ಬೇರೆ. ಅನುಕೂಲಕ್ಕೆ, ಕಾಟಾಚಾರಕ್ಕೆ ಆಗುವ ಮದುವೆ ನಂಗೆ ಬೇಡ್ವೇ ಬೇಡ,' ಎಂದು ಖಡಾಖಂಡಿತವಾಗಿ ನಿರಾಕರಿಸಿದ್ದಳು.

ಅಪ್ಪನದಾದರೆ ಇದು ಯಾವ ರಗಳೆಯೂ ಇರಲಿಲ್ಲ. ಹೊರಗಿನ ಕೋಣೆಯ ಟಿವಿಯಲ್ಲಿ ಅಪ್ಪನ ಮೆಚ್ಚಿನ ಕ್ರಿಕೆಟ್ ಆಟದ ಕಮೆಂಟ್ರಿಯ ಬೊಬ್ಬೆ–ಚಪ್ಪಾಳೆಗಳು ಮನೆಯಿಡೀ ಪ್ರತಿಧ್ವನಿಸುತ್ತ ಕಿವಿಗೆ ಅಪ್ಪಳಿಸುತ್ತಿದ್ದವು. ಅವುಗಳ ಎಡೆಯಲ್ಲಿ, 'ಕತೆ–ಕಾದಂಬರಿ–ಸಿನಿಮಾ... ಮನಸ್ಸೇ ತಿರುಚಿ... ಸ್ವಂತ ಕಾಲ ಮೇಲೆ ನಿಂತೇ...' ಒಳಗಿನಿಂದ ಅಮ್ಮನ ಬಡಬಡಿಕೆ ಅಸ್ಪಷ್ಟವಾಗಿ ತೇಲಿಬರುತ್ತಿತ್ತು. ಮನಸ್ಸಿನ ಗೊಂದಲದಿಂದಾಗಿ ಅವಳ ಕಣ್ಣಲ್ಲಿ ನೀರು ತುಂಬಿದಂತಾಯಿತು. ಬದುಕೆಂಬುದು ತನ್ನೆದುರಿದ್ದರೂ, ಮಾರ್ಗದರ್ಶನ ಮಾಡುವವರು ಯಾರೂ ಇಲ್ಲವೆನಿಸಿ ಗಂಟಲು ಕಟ್ಟಿದಂತಾಯಿತು. ತಟ್ಟನೆ ಅಪ್ರಜ್ಞಾಪೂರ್ವಕವಾಗಿ, ಸಂದೇಶನ ಸಲಹೆಗಾಗಿ ಮನಸ್ಸು ಕಾತರಿಸಿತು. ಮರುಗಳಿಗೆಯಲ್ಲಿ ತನ್ನದೇ ಮನಸ್ಸಿನ ಬಗೆಗೆ ಬೆರಗುಗೊಳ್ಳುವುದಾಯಿತು.

ಕಿವಿಯೋಲೆಗಳನ್ನು ತೆಗೆದಿರಿಸುತ್ತಿದ್ದವಳಿಗೆ ಶಮಾ ಹೇಳಿದ ಮಾತುಗಳೇ ಒಂದೊಂದಾಗಿ ನೆನಪಿಗೆ ಬರತೊಡಗಿದವು.